**National Journal of Multidisciplinary Research and Development**
**ISSN: 2455-9040; Impact Factor: RJIF 5.22**
**www.nationaljournals.com**
**Volume 2; Issue 2; May 2017; Page No. 102-105**

# ನಾಗತಿಹಳ್ಳಿ ಚಂದ್ರಶೇಖರ ಅವರ ಸಿನಿಮಾಗಳು; ಅವಲೋಕನ

**[1] ದೊರೇಶ, [2] ಡಾ. ಪಿ,ಎಂ ಗಂಗಾಧರಯ್ಯ**

[1] ಸಹಾಯಕ ಪ್ರಾಧ್ಯಾಪಕರು, ಕನ್ನಡ ಸ್ನಾತಕ ಮತ್ತು ಸ್ನಾತಕೋತ್ತರ ವಿಭಾಗ, ಸರ್ಕಾರಿ ಪ್ರಥಮ ದರ್ಜೆ ಕಾಲೇಜು, ಕಡೂರು

[2] ಸಹಾಯಕ ಪ್ರಾಧ್ಯಪಕರು, ಡಾ. ಡಿ. ವಿ ಗುಂಡಪ್ಪ ಕನ್ನಡ ಅಧ್ಯಯನ ಕೇಂದ್ರ, ತುಮಕೂರುವಿಶ್ವವಿದ್ಯಾನಿಲಯ,ತುಮಕೂರು

## ಪರಿಚಯ

ನಾಗತಿಹಳ್ಳಿ ಚಂದ್ರಶೇಖರವರ ಸಿನಿಮಾ ಜಾಡನ್ನು ಗುರುತಿಸುವುದಾದರೆ, ಅವರು ನೇರವಾಗಿ ಸಿನಿಮಾ ನಿರ್ದೇಶನಕ್ಕೆ ಬಂದವರಲ್ಲ. ಸುರೇಶ್ಹೆಬ್ಳೀಕರ್ ನಿರ್ದೇಶನದ, ನಾ.ಡಿಸೋಜ ಅವರ ಕಾದಂಬರಿ ಆಧಾರಿತ 'ಕಾಡಿನ ಬೆಂಕಿ' (1986) ಸಿನಿಮಾದ ಚಿತ್ರಕತೆಯ ಬರವಣಿಗೆ ಮಾಡುವ ಮುಖಾಂತರ ಸಿನಿಮಾ ರಂಗ ಪ್ರವೇಶಿಸಿದರು. ಸಿನಿಮಾ ಕ್ಷೇತ್ರದ ಪ್ರಾರಂಭದ ದಿನಗಳಲ್ಲಿ ಸ್ಕ್ರಿಪ್ಟ್‌ರೈಟರ್ ಎಂದು ಗುರುತಿಸಿಕೊಂಡರು. ಅನಂತರದಲ್ಲಿ ಹಿರಿತೆರೆ ಮತ್ತು ಕಿರುತೆರೆಗೆ ಅನೇಕ ಸಿನಿಮಾ ಹಾಗೂ ಧಾರಾವಾಹಿಗಳ ನಿರ್ದೇಶನ ಮಾಡಿದ್ದಾರೆ. 'ಉಂಡು ಹೋದ ಕೊಂಡು ಹೋದ' ಚಿತ್ರದ ಮೂಲಕ ಸ್ವತಂತ್ರ ನಿರ್ದೇಶಕರಾದ ನಾಗತಿಹಳ್ಳಿ ಚಂದ್ರಶೇಖರ ತಮ್ಮ ನಿರ್ದೇಶನದ ಕೊಟ್ರೇಶಿಕನಸು, ಅಮೇರಿಕಾ!!ಅಮೇರಿಕಾ!! ಮತ್ತು ಹೂಮಳೆ ಚಿತ್ರಗಳಿಗೆ ರಾಷ್ಟ್ರೀಯ ಚಲನಚಿತ್ರ ಪುರಸ್ಕಾರಗಳನ್ನು ಪಡೆದುಕೊಂಡರು. ವಿಭಿನ್ನ ಶೈಲಿಯ ನಿರೂಪಣೆಯಿದ್ದ ಅಮೃತಧಾರೆ ಸಿನಿಮಾಗೆ ಫಿಲ್ಮ್‌ಫೇರ್ ಪ್ರಶಸ್ತಿ ದೊರಕಿದೆ. ಎರಡು ದಶಕಕ್ಕೂ ಹೆಚ್ಚು ಕಾಲ ಕನ್ನಡ ಚಿತ್ರರಂಗದಲ್ಲಿ ಗುರುತಿಸಿಕೊಂಡು ಈಗ ಸಂಪೂರ್ಣವಾಗಿ ಸಿನಿಮಾಲೋಕದಲ್ಲೇ ಕಾರ್ಯನಿರತರಾಗಿರುವ ನಾಗತಿಹಳ್ಳಿಯವರು ಸೃಜನಾತ್ಮಕ ಹಾಗೂ ಕ್ರಿಯಾಶೀಲ ನಿರ್ದೇಶಕ ಎನಿಸಿಕೊಂಡಿದ್ದಾರೆ. ತಾವು ನಿರ್ಮಿಸುವ ಅತ್ಯುತ್ತಮ ಕಲಾಕೃತಿಯೊಂದು ಕೆಲವೊಮ್ಮೆ ಅವರಿಗೇ ದೊಡ್ಡ ಸವಾಲಾಗಿ ನಿಲ್ಲುತ್ತದೆ. ಈ ಮಾತನ್ನು ಅಮೇರಿಕಾ ಅಮೇರಿಕಾ ಚಿತ್ರಕ್ಕೆ ನಿಸ್ಸಂಶಯವಾಗಿ ಹೇಳಬಹುದು. ಈ ಚಿತ್ರದ ಬಳಿಕ ನಾಗತಿಹಳ್ಳಿ ಅವರ ನಿರ್ದೇಶನದಲ್ಲಿ ಹಲವು ಸಿನಿಮಾಗಳು ಬಂದವು. ಆದರೆ ಅಮೇರಿಕಾ ಅಮೇರಿಕಾದಂತಹ ಇನ್ನೊಂದು ಸಿನಿಮಾ ಮಾಡಿ ಈ ಚಿತ್ರದ ಸೀಮೋಲ್ಲಂಘನ ಮಾಡಲು ನಾಗತಿಹಳ್ಳಿ ಅವರಿಂದ ಸಾಧ್ಯವಾಗಲಿಲ್ಲ.

ನಾಗತಿಹಳ್ಳಿ ಚಂದ್ರಶೇಖರ ಚಲನ ಚಿತ್ರರಂಗ ಪ್ರವೇಶಿಸಿ 20 ವರ್ಷಗಳಾಗಿವೆ. ಇವರ ಇತ್ತೀಚಿನ 'ಮಾತಾಡ ಮಾತಾಡ ಮಲ್ಲಿಗೆ' ಸೇರಿ ಹತ್ತು ಚಿತ್ರಗಳಿಗೆ ನಿರ್ಶೇಶಿಸಿದ್ದಾರೆ. ಸಂಖ್ಯೆಯ ದೃಷ್ಟಿಯಿಮದ ಕಡಿಮೆ ಎನಿಸಿದರೂ ಸರ್ವಕಾಲಿಕ ಮಹತ್ವದ ದೃಷ್ಟಿಯಿಂದ ಹತ್ತು ಚಿತ್ರಗಳೂ ಕನ್ನಡ ದೇಶದ ಚಿತ್ರರಂಗದಲ್ಲಿ ವಿಶಿಷ್ಟ ಕೊಡುಗೆಗಳಾಗಿಯೇ ಪರಿಗಳಿತವಾಗತಕ್ಕವು. ನಾಗತಿಹಳ್ಳಿ ಯವರ 'ಉಂಡೂ ಹೋದ ಕೊಂಡೂ ಹೋದ' ಚಿತ್ರ ಗ್ರಾಮೀಣ ಸಂವೇದನೆಯ ನಿರುದ್ಯೋಗ ಯುವಕನ ವ್ಯಕ್ತಿತ್ವವನ್ನು ಬಿಂಬಿಸುತ್ತಾರೆ ಯುವ ಪ್ರೇಮಿಗಳ ಸರಸ ಸಲ್ಲಾಪಗಳನ್ನು 'ಬಾ ನಲ್ಲೆ ಮಧು ಚಂದ್ರಕೆ' ಹೇಳುತ್ತದೆ. ಗ್ರಾಮೀಣ ಸಂವೇದನೆಯ ದಲಿತರ ಬದುಕನ್ನು 'ಕೊಟ್ರೇಶಿ ಕನಸು' ತಿಳಿಸುತ್ತದೆ. ಇವರ ಅಮೇರಿಕಾ! ಅಮೇರಿಕಾ!' ಚಿತ್ರ ದೇಶಿಯ ಸಂಸ್ಕೃತಿ ಮತ್ತು ಪಾಶ್ಚಾತ್ಯರ ಸಂಸ್ಕೃತಿಯನ್ನು ತಿಳಿಸುತ್ತದೆ. ವಿಧವೆಯರು ಬದುಕಿನಲ್ಲಿ ಪಡುವ ಕಷ್ಟ ನಷ್ಟಗಳು ಮತ್ತು ವಿಧವೆಯರು ಮರುಮದುವೆಯಾಗಬಾರದಂತೆ ಭಾರತ ಸಂಸ್ಕೃತಿಯ ನಿರ್ಭಂದದಿಂದ ವಿಧವೆಯರು ಪಡುವ ಕಷ್ಟಗಳ ಗೋಳಿನಕತೆ ಹೇಳುವ ಚಿತ್ರ 'ಹೂಮಳೆ' ಪೂರ್ವ ನಾಡಿನ ಹುಡುಗ ಪಶ್ಚಿಮ ನಾಡಿನ ಹುಡುಗಿಯ ಪ್ರೇಮಕತೆ ಹೇಳುವ ಚಿತ್ರ 'ನನ್ನ ಪ್ರೀತಿಯ ಹುಡುಗಿ' ನೇಪಾಳ ರಾಜ್ಯ ಮನೆತನದ ಕತೆಯನ್ನು ಆದರಿಸಿದ ಚಿತ್ರ 'ಸೂಪರ್ ಸ್ಟಾರ್' ಪೂರ್ವ – ಪಶ್ಚಿಮ ರಾಷ್ಟ್ರಗಳ ಸಂಗೀತವನ್ನು ತಿಳಿಸುವ ಚಿತ್ರ 'ಪ್ಯಾರಿಸ್ ಪ್ರಣಯ' ಇನ್ನು 'ಅಮೃತಧಾರೆ' ಯುವ ದಂಪತಿಗಳ ಕತೆ. ಸಾಮಾಜಿಕ ಕಳಕಳಿ ಇರುವ ಹಾಗೂ ಬೆಳವಣಿಗೆಯ ಗತಿಯಲ್ಲಿರುವ ರಾಷ್ಟ್ರದ ಪರಿಕಲ್ಪನೆ ಇರುವ ನಿರ್ದೇಶನ ಮಾತ್ರ ಉತ್ತಮ ಚಿತ್ರ ಕೊಡಬಲ್ಲ ಎಂಬುದಕ್ಕೆ ನಾಗತಿಹಳ್ಳಿಯವರು ಸಾಕ್ಷಿಯಾಗಿದ್ದಾರೆ. ಬಾಲ್ಯದಿಂದಲೇ ನಾಗತಿಹಳ್ಳಿಯವರು ದೇಶವಿದೇಶಗಳನ್ನು ಸುತ್ತಾಡಿ ಅಲ್ಲಿನ ಅನೇಕ ಚಿತ್ರಗಳನ್ನು ವೀಕ್ಷಿಸಿ ಅವುಗಳಿಂದ ಆಕರ್ಷಿತರಾಗಿ ಪ್ರಭಾವಿತರಾಗಿ ಬೆಲೆ ಬಾಳುವ ಚಿತ್ರವನ್ನು ಸೃಷ್ಠಿ ಮಾಡಿದ್ದಾರೆ. ಜೊತೆಗೆ ಜೀವಾನುಭವದ ಕಡೆ ಹೆಚ್ಚು ಮುತುವರ್ಜಿವಹಿಸಿ ಬದುಕನ್ನು ಅರ್ಥಮಾಡಿಕೊಳ್ಳಲು ಪ್ರಯತ್ನಿಸಿದ್ದಾರೆ. ತಮ್ಮ ಚಿತ್ರಗಳಲ್ಲಿ ಬಾಲ್ಯ ಜೀವನದ ಅನುಭವದಿಂದ ಹಿಡಿದು ವ್ಯಕ್ತಿಯ ಎಲ್ಲಾ ಹಂತಗಳ ಅನುಭವವನ್ನು ಸಮಾಜದ ಸಮುದಾಯದ ಅನುಭವಗಳನ್ನು ಅಮರ್ಥವಾಗಿ ಸೆರೆ ಹಿಡಿದಿಟ್ಟಿದ್ದಾರೆ. ಸಮಾಜದಲ್ಲಿ ನಡೆಯುವ ಅನ್ಯಾಯ ಅತ್ಯಾಚಾರ, ಕೊಲೆ, ಸುಲಿಗೆ, ಬಡತನ, ಸುಖ–ದುಃಖ ಸ್ವಾತಂತ್ರ ಹರಣ, ಅಸಮಾನತೆ, ವಿಧವೆಯರ ನೋವು, ಪ್ರೀತಿ–ಪ್ರೇಮ, ಮಕ್ಕಳು, ಮಧ್ಯಮ ವರ್ಗದ ವ್ಯಕ್ತಿಯ ಭ್ರಮೆಗಳು ಆದರ್ಶ ಹುಟ್ಟು–ಸಾವು ತ್ಯಾಗ ಮತ್ತು ಸಹನೆಯತಂಹ ಅಮಶಗಳನ್ನು ತಮ್ಮ ಚಿತ್ರದಲ್ಲಿ ಕೊಡುವುದನ್ನು ಅವರು ಮರೆತಿಲ್ಲ. 'ಉಂಡೂ ಹೋದ ಕೊಂಡೂ ಹೋದ' ದಿಂದ (1991) ಮಾತಾಡ್ ಮಾತಾಡ್ ಮಲ್ಲಿಗೆ. (2006)ವರಿಗಿನ ನಾಗತಿಹಳ್ಳಿ ಚಂದ್ರಶೇಖರ ಅವರು ನಿರ್ದೇಶಿಸಿದ ಚಿತ್ರಗಳಲ್ಲಿ ಒಂದು ವೈಶಿಷ್ಟವೆಂದರೆ ಕೆಲವು ಚಿತ್ರಗಳು ಗ್ರಾಮೀಣ ಪರಿಸರದ ದಟ್ಟ ಚಿತ್ರಣವಾಗಿದೆ. ಇನ್ನು ಕೆಲವು ವಿದೇಶಿಯ ಸಂಸ್ಕೃತಿಯ ದಟ್ಟ ಪರಿಚಯ ನೀಡುತ್ತವೆ. ಗ್ರಾಮೀಣ ಪರಿಸರದ ಚಿತ್ರಗಳಲ್ಲಿ ಸಾಮಾಜಿಕ ಅಸಮಾನತೆಯ ಬಗೆಗಿನ ಚಿಂತನೆ ಗ್ರಾಮೀಣ ಪರಿಸರದಲ್ಲಿನ ನೊಂದ ಜೀವಿಗಳ ಅಳಲು ಅವರದೇ ಸಾಹಿತ್ಯದಲ್ಲಿ ಹೇಗೆ ಅಭಿವ್ಯಕ್ತಿವಾಗಿದೆಯೋ ಅದು ದೃಶ್ಯಮಾಧ್ಯಮದಲ್ಲೂ ಪ್ರತಿಫಲಿತವಾಗಿದೆ. ಹೀಗಾಗಿ ಅವರ ಸಾಹಿತ್ಯದಲ್ಲಿ ಬರುವ ವ್ಯಕ್ತಿಗಳೇ ಚಲನಚಿತ್ರದಲ್ಲೂ ಮುಂದುವರೆಯುತ್ತಾರೆ. ಗ್ರಾಮೀಣ ಪರಿಸರದ ಜೀವನದ ವಿವಿಧ ಮುಖಗಳನ್ನು ಅನಾವರಣಗೊಳಿಸಿದ್ದಾರೆ. ನಾಗತಿಹಳ್ಳಿಯವರ ಕಥಾ ವಸ್ತು ಚಿತ್ರದಿಂದ ಚಿತ್ರಕ್ಕೆ ಬೆಳೆಯುತ್ತಾ ಹೋಗಿ ತಮ್ಮದೆ ಆದಂತಹ ಸಿನಿಮಾ ಶೈಲಿಯೊಂದು ಸಿದ್ಧಿಸಿದಂತಾಗಿದೆ. ಇಂದೊಂದು ಗಮನಾರ್ಹವಾದ ಸಾಧನೆ, ನಾಗತಿಹಳ್ಳಿಯವರ ಸಿನಿಮಾ ಶೈಲಿಯನ್ನು ಇದರಲ್ಲಿ ಗುರುತಿಸಬಹುದು. ಹೊಸ ಅಲೆಯ ನಿರ್ದೇಶಕರಲ್ಲಿ ಹಲವಾರು ಪಾಶ್ಚಾತ್ಯ ಪ್ರಭಾವಗಳಿಗೆ ಒಳಗಾದದ್ದು ಅದರಲ್ಲಿ ನಾಗತಿಹಳ್ಳಿಯವರು ಒಬ್ಬರು ಪಾಶ್ಚಾತ್ಯ ಮತ್ತು ದೇಶೀಯ ಅನುಭವವನ್ನು ತಮ್ಮ ದೃಶ್ಯಮಾಧ್ಯಮದಲ್ಲಿ ಕಟ್ಟಿಕೊಟ್ಟಿದ್ದಾರೆ. ಗ್ರಾಮೀಣ ಪರಿಸರದಿಂದಲೇ ಬಂದಂತಹ ನಾಗತಿಹಳ್ಳಿ ತಮ್ಮ ಅನುಭವವನ್ನು ವಿದೇಶಿ ಸಂಸ್ಕೃತಿಯನ್ನು ತಮ್ಮ ವಿತ್ರದ ಮೂಲಕ ವ್ಯಕ್ತಪಡಿಸಿದ್ದಾರೆ. ಈ ರೀತಿ ವಲಯವನ್ನು ದೃಶ್ಯ ಮಾಧ್ಯಮದಲ್ಲಿ ಕಟ್ಟಿಕೊಡಬಲ್ಲ.

ನಾಗತಿಹಳ್ಳಿ ಚಂದ್ರಶೇಖರ ಅವರು ಮನುಷ್ಯನ ಮನಸ್ಸನ್ನು ಭಾವನೆಗಳನ್ನು8 ಕೆದುಕುತ್ತ ಮನೋವೈಜ್ಞಾನಿಕ ವಿಷಯಗಳ ಮೇಲೆ ಚಿತ್ರರಚನೆ ಮಾಡಿ ನೋಡುಗರಿಗೆ ಒಂದು ಹೊಸ ಲೋಕದ ಪರಿಚಯವನ್ನೇ ಮಾಡಿಕೊಟ್ಟಿದ್ದಾರೆ. ಮನುಷ್ಯನ ಮನಸ್ಸಿನ ಆಂತರಿಕ ವ್ಯವಹಾರಗಳನ್ನು ವಿವಿಧ ಸ್ತರಗಳಲ್ಲಿ ಹೆಚ್ಚು ವೈಜ್ಞಾನಿಕವಾಗಿ ಮತ್ತು ಅಷ್ಟೇ ಸಾಹಿತ್ಯಿಕವಾಗಿ ಬಿಂಬಿಸಿದ್ದಾರೆ. ಸನ್ನಿವೇಶ ನಿರ್ಮಾಣ ಮಾಡುವಲ್ಲಂತೂ ಇವರು ನಿಪುಣರು ಅದರಲ್ಲಿ ಅದ್ಭುತ ಜಾಣ್ಮೆ ಇದೆ. ಅಮೃತಧಾರೆಯ ಸಮಕಾಲೀನ ಚಿತ್ರಗಳಲ್ಲಿ ರೌಡಿಸಂ, ಸೆಕ್ಸ, ಪ್ರಕೋಪ, ಮಚ್ಚು, ಲಾಂಗು, ಹಿಂಸೆ ಕ್ರೌರ್ಯವನ್ನೆ ತಿಳಿಸುತ್ತವೆ. ಕೆಸರಿನಲ್ಲಿ ಕಮಲದ ಹೂ ಕುಟ್ಟಿಕೊಂಡಂತೆ ಕೆಟ್ಟ ಸಂಸ್ಕೃತಿಯಲ್ಲಿ ಅಮೃತಧಾರೆ ಹುಟ್ಟಿಕೊಂಡಿದೆ. ಅಷ್ಟೇ ಸ್ವಚ್ಚ ಸುಂದರವಾದ ಚಿತ್ರ ಮೃತಧಾರೆ ಇಂದು ಎಷ್ಟೋ ಚಿತ್ರಗಳು ಜನರಿಗೆ ಹೊಡೆದಾಡುವ ಸಂಸ್ಕೃತಿಯನ್ನು ತಿಳಿಸುತ್ತವೆ. ಮಾತು ಮಾತಿಗೆ ಲಾಮಗು, ಮಚ್ಚು, ಚಾಕು, ಚೂರಿ, ಚೈನು ಹಿಡಿಯುವಂತ ದೃಶ್ಯಗಳು ಹಿಂದಿನ ಸಿನಿಮಾದಲ್ಲಿ ಸಮಾನ್ಯವಾಗಿ ಕಾಣಿಸಿಕೊಳ್ಳುತ್ತದೆ. ಇಂಥ ಸಂಸ್ಕೃತಿಯನ್ನು ಪ್ರತಿಬಿಂಬಿಸುವ ಚಿತ್ರಗಳು ಜನರನ್ನು ದಾರಿ ತಪ್ಪಿಸುತ್ತವೆ. ಇಂಥ ಚಿತ್ರಗಳಿಂದ ಕನ್ನಡ ಚಿತ್ರರಂಗ ಹಾಳಾಗುತ್ತಿದೆ. ಅದನ್ನು ರಕ್ಷಿಸಬೇಕಾದರೆ ಅಮೃತಧಾರೆಯಂತ ಚಿತ್ರಗಳು ಚಿತ್ರರಂಗಕ್ಕೆ ಬೇಕು. ಆದರೆ ಅಮೃತಧಾರೆ ಹೊಡೆದಾಡುವ ಸಂಸ್ಕರತಿಯಿಂದ ಬಹುದೂರ ಉಳಿದು ಒಂದು ಸಾಂಸಾರಿಕ ಕಥೆ ಹೊಂದಿದೆ. ಇದರಲ್ಲಿ ಸೂಕ್ಷ್ಮ ಸಂವೇಧಿತ್ವದ ಹೆಣಿಕೆ, ಮಧುರವಾದ ಹಾಡುಗಳು ಮನುಷ್ಯನ ಮನಸ್ಸುಗಳನ್ನು ಮುಟ್ಟುವಂತವುಗಳಾಗಿವೆ. ಈ ಚಿತ್ರ ಮನೋಲ್ಲಾಸದ ಮನವನ್ನರಳಿಸುವ ಕೆಲಸಮಾಡಿದೆ. ಮಹಾನಗರಗಳಲ್ಲೇ ವಾಸಿಸುತ್ತಿದ್ದ ನಾಗತಿಹಳ್ಳಿ ಅವರಿಗೂ ಇಂಥ ಅನುಭವಗಳು ಸಹಜವಾಗಿಯೇ ಕಾಡಿವೆ. ಆದ್ದರಿಂದ ಪಟ್ಟಣಗಳಲ್ಲಿನ ಹೊಸ ನಾಗರಿಕತೆ ಸಂಸ್ಕೃತಿಯ ಪ್ರಭಾವಕ್ಕೆ ಒಳಗಾಗಿ ಜನ ವರ್ತಿಸುತ್ತಿದ್ದ ರೀತಿಯನ್ನು ಅವರ ನಡವಳಿಕೆಗಳನ್ನು ಮನೋವಿಜ್ಞಾನದ ತಳಹದಿಯ ಮೇಲೆ ನಾಗತಿಹಳ್ಳಿ

ಅವರು ತಮ್ಮ ಚಿತ್ರದಲ್ಲಿ ಚಿತ್ರಿಸಿದ್ದಾರೆ.ಇವರ ನಿರ್ದೇಶನದ ಕೊಟ್ರೇಶಿ ಕನಸು ಬಹು ಆಯಾಮದಲ್ಲಿ ಚರ್ಚಿಸಬೇಕಾದ ಸಿನಿಮಾ. ಸಮಾಜದಲ್ಲಿನ ದಲಿತರ ಬದುಕು, ಅವರ ಆಸೆಗಳು, ಅಸಹಾಯಕತೆ, ಮನುಷ್ಯರ ನಡುವಿನ ದ್ವೇಷ, ಶಕ್ತಿವಂತರ ವಂಚನೆ ಹಾಗೂ ಅವುಗಳನ್ನು ಮೆಟ್ಟಿ ನಿಂತು ಎದುರಿಸಲು ಬೇಕಾದ ಶೈಕ್ಷಣಿಕ ಮಹತ್ವವನ್ನು ಆ ಸಿನಿಮಾದೊಳಗೆ ದೇಶೀಯ ನೆಲೆಯಲ್ಲಿ ತಂದಿದ್ದಾರೆ. ಮುಖ್ಯವಾಗಿ ಈ ಸಿನಿಮಾದ ಪಾತ್ರಗಳ ಮೂಲಕ ನಮ್ಮ ಸಮಾಜಕ್ಕೊಂದು ಉತ್ತಮ ಸಂದೇಶ ನೀಡಿದ್ದಾರೆ ಎನ್ನಬಹುದು. ಕೊಟ್ರೇಶಿ ಸಿನಿಮಾದಲ್ಲಿ ದಲಿತರ ಬದುಕು ಹಸನುಗೊಳ್ಳಲು ಶಿಕ್ಷಣಕ್ಕಾಗಿ ಹಪಹಪಿಸುವ ಮನಸ್ಸುಗಳನ್ನು ಚಿತ್ರಿಸಿ ನಿರೂಪಿಸಿದಂತೆಯೇ, ಹೂಮಳೆ ಚಿತ್ರದಲ್ಲಿ ಸಾಮಾಜಿಕವಾಗಿ ಶಾಪದಂತಿರುವ ವಿಧವಾ ಸಮಸ್ಯೆ ಹಾಗೂ ಸಮಾಜ ವಿರೋಧಿ ನೆಲೆಯಲ್ಲಿ ರೂಪಿತವಾಗಿರುವ ನಕ್ಸಲೈಟ್‌ನಂತಹ ದೀರ್ಘಕಾಲೀನ ಸಾಮಾಜಿಕ ಸಮಸ್ಯೆಗಳನ್ನು ಚರ್ಚಿಸಿರುವ ಚಿಂತನೆಯು ವ್ಯಷ್ಟಿ ಮತ್ತು ಸಮಷ್ಟಿಯ ಸಮಸ್ಯೆಗಳೆರಡನ್ನೂ ಒಂದೇ ಸಿನಿಮಾದಲ್ಲಿಟ್ಟು ನೋಡುವ ಪ್ರಯತ್ನದ ಅಭಿವ್ಯಕ್ತಿಯಾಗಿದೆ. ನಾಗತಿಹಳ್ಳಿಯವರ ಸದಭಿರುಚಿಯ ಈ ಸಾಮಾಜಿಕ ಕಾಳಜಿ ಅನುಸರಣೀಯ.

'ಅಮೇರಿಕಾ ಅಮೇರಿಕಾ' ಗ್ರಾಮೀಣ ಹಾಗೂ ನಗರ ಕೇಂದ್ರಿತ ಬದುಕನ್ನು ಒಳಗೊಂಡ ಬಾಲ್ಯದ ಗೆಳೆಯರ ಸುತ್ತ ಹೆಣೆಯಲಾದ ತ್ರಿಕೋನ ರೋಮ್ಯಾಂಟಿಕ್ ಪ್ರೇಮ ಕಥಾನಕ. ಇದು ಈ ಚಿತ್ರದ ಪ್ರಧಾನ ಚೌಕಟ್ಟು. ಇಲ್ಲಿಯ ಪ್ರೇಮ ಕಥಾನಕದಲ್ಲಿ ಅಂತಹ ಹೇಳಿಕೊಳ್ಳುವಂತಹ ವಿಶೇಷತೆಯೇನೂ ಇಲ್ಲ ಎನಿಸಿದರೂ, ಬದುಕಿನ ಹುಡುಕಾಟದಲ್ಲಿ ಅಮೆರಿಕಕ್ಕೆ ಹಾರಿ ಹೋಗಿ ಅಲ್ಲಿಯೇ ನೆಲೆಸುವ ಅನಿವಾಸಿ ಭಾರತೀಯರ ಬವಣೆಗಳನ್ನು ಮಾಮೂಲಿ ಎನ್ನಿಸುವ ಪ್ರೇಮ ಕತೆಯ ಮೂಲಕವೇ ಅದ್ಭುತವಾಗಿ ಚಿತ್ರಿಸಿದೆ. ಅಮೆರಿಕ–ಭಾರತಗಳಂತಹ ಎರಡು ದೇಶಗಳ ನಡುವಿನ ಜೀವನ ವಿಧಾನ, ಸಂಪ್ರದಾಯಗಳು, ಆಚರಣೆ ಮತ್ತು ಸಾಂಸ್ಕೃತಿಕ ಸಂಗತಿಗಳನ್ನು ಈ ಚಿತ್ರದಲ್ಲಿ ತುಲನೆ ಮಾಡಿ ಎರಡು ಭಿನ್ನ ಸಂಸ್ಕೃತಿಗಳ ನಡುವೆ ನಡೆಯುವ ಸಂಘರ್ಷಗಳನ್ನು ತೆರೆದಿಟ್ಟಿತು. ಪ್ರೇಮ ಕಥಾನಕದ ಜತೆಯಲ್ಲಿ ಅಮೆರಿಕದ ಸಂಸ್ಕೃತಿಯನ್ನು ವೈಭವೀಕರಿಸದೆ, ಭಾರತೀಯ ಸಂಸ್ಕೃತಿಯನ್ನು ತುಚ್ಚೀಕರಿಸದೆ ಅವೆರೆಡರ ತೌಲನಿಕ ಪರಾಮರ್ಶೆಯಲ್ಲಿ ಕಾಯ್ದುಕೊಂಡಿರುವ ಸಮತೋಲನ ನಿರೂಪಣೆಯೇ ಈ ಸಿನಿಮಾದ ಪ್ರಧಾನ ಸತ್ವವಾಗಿದೆ. ಇಂತಹ ಸಂಗತಿಗಳನ್ನು ಪಾತ್ರ ಮತ್ತು ಸನ್ನಿವೇಶಗಳ ಮುಖಾಂತರ ಸಿನಿಮಾ ಹೇಗೆ ನಿರೂಪಿತವಾಗಿದೆ ಎನ್ನುವುದರಲ್ಲಿಯೇ ಈ ಸಿನಿಮಾ ಯಶಸ್ಸು ಕಂಡಿತು. ಹೆಚ್.ಎಸ್.ವೆಂಕಟೇಶಮೂರ್ತಿ ಅವರ ಗೀತೆಯಲ್ಲಿ ಮೂರು ಜನರ ಪಾತ್ರಗಳ ಗುಣ ಸ್ವಭಾವಗಳನ್ನು ಸೂಚ್ಯವಾಗಿ ಮತ್ತು ಸಾಂಕೇತಿಕವಾಗಿ ತೋರಿಸಲಾಗಿತ್ತು. ಅಲ್ಲಿ ಕೊಂಚ ಅಮೂರ್ತವಾಗಿ ತೋರಿಸಿದ್ದನ್ನು ಇಲ್ಲಿ ಸಂಭಾಷಣೆಯಲ್ಲಿ ಹೆಚ್ಚು ಮೂರ್ತಗೊಳಿಸಲಾಗಿದೆ. ಶಶಾಂಕ ಆ ಸಂದರ್ಭದಲ್ಲಿ 'ಮನುಷ್ಯನಿಗೆ ರೆಕ್ಕೆಗಳಿರಬೇಕು. ಅವರು ಹಕ್ಕಿ ತರ ಹಾರ್ಬೇಕು. ಬೆಟ್ಟ, ನದಿ, ಸಮುದ್ರದ ಮೇಲೆ ಹಾರ್ಬೇಕು, ಪ್ರಪಂಚ ನೋಡ್ಬೇಕು. ರೆಕ್ಕೆ ಇರ್ಬೇಕು ರೆಕ್ಕೆ!' ಎನ್ನುವಾಗ ಅಮೆರಿಕಾದೆಡೆಗೆ ಆತನ ಸೆಳೆತ ಎಷ್ಟು ಆಳವಾದದ್ದು ಎಂಬುದು ತಿಳಿಯುತ್ತದೆ. ಅದಕ್ಕೆ ತದ್ವಿರುದ್ಧವಾಗಿ ಸೂರ್ಯ 'ಮನುಷ್ಯನಿಗೆ ಬೇಕಾಗಿರೋದು ರೆಕ್ಕೆ ಅಲ್ಲ ಕಣೋ, ಬೇರುಗಳು. ಇದ್ದ ಜಾಗದಲ್ಲೇ ಆಳವಾಗಿ ಬೇರುಬಿಟ್ಟ ಇಲ್ಲೇ ಬೆಳೀಬೇಕು. ನಮ್ ಭೂಮಿಯ ರಸಾನ ಹೀರಿ ಇಲ್ಲೇ ಫಲ ಕೊಡ್ಬೇಕು. ರೆಕ್ಕೆ!' ಎಂದು ಹೇಳುವಾಗ ಆತನಲ್ಲಿ ತನ್ನ ತಾಯ್ನಾಡಿನ ಬಗೆಗಿನ ಅದಮ್ಯ ಆಬಿಮಾನ ವ್ಯಕ್ತವಾಗುತ್ತದೆ. ಶಶಾಂಕ 'ರೆಕ್ಕೆ'ಯನ್ನು ಸಂಕೇತಿಸಿದರೆ ಸೂರ್ಯ 'ಬೇರಿ'ನ ಪ್ರತೀಕವಾಗುತ್ತಾರೆ. 'ರೆಕ್ಕೆ–ಬೇರು' ಎಂಬುದು 'ಜಾಗತೀಕರಣ ಮತ್ತು 'ದೇಶೀಯತೆ'ಗೂ ಒಂದು ರೂಪಕವಾಗಿ ಬಂದಿದೆ. ಜಾಗತೀಕರಣದ ಗಾಳಿ ವಿಶ್ವದಾದ್ಯಂತ ಬೀಸತೊಡಗಿದ್ದು ಶತಮಾನದ ತೊಂಬತ್ತರ ದಶಕದಲ್ಲಿ. ಆ ಸಂದರ್ಭಕ್ಕಾಗಲೇ ಅಮೆರಿಕಾ ಉಳ್ಳವರ ಸ್ವರ್ಗವಾಗಿ ಜಗತ್ತಿಗೆ ಗೋಚರವಾಗತೊಡಗಿತು. ಆ ಕಾಲಘಟ್ಟದಲ್ಲಿ ಜಗತ್ತಿನ ಸಾಫ್ಟ್‌ವೇರ್ ಇಂಜಿನಿಯರ್‌ಗಳನ್ನು ಕೈಬೀಸಿ ತನ್ನೆಡೆಗೆ ಕರೆಯುತಲಿತ್ತು. ಪರಿಣಾಮವಾಗಿ 'ಬೌದ್ಧಿಕಪಲಾಯನ'(ಬ್ರೇನ್‌ಡ್ರೇನ್)ವು ದೊಡ್ಡ ಪ್ರಮಾಣದಲ್ಲಿಯೇ ನಡೆಯಿತು. ಅಂದು ಬೀಸಿದ ಜಾಗತೀಕರಣದ ಗಾಳಿ ಇಂದು ಬಿರುಗಾಳಿಯಾಗಿ ಅಪ್ಪಳಿಸಿದೆ. ಅದರ ರಭಸಕ್ಕೆ ಭಾರತವೂ ಸೇರಿದಂತೆ ಪ್ರಪಂಚದ ಅನೇಕ ದೇಶಗಳ ಸ್ಥಳೀಕತೆ, ದೇಶೀಯತೆ ಮತ್ತು ಮೂಲ ಸಂಸ್ಕೃತಿ ಕೊಚ್ಚಿಕೊಂಡು ಹೋಗುತ್ತಿರುವುದನ್ನು ಕಾಣುತ್ತಿದ್ದೇವೆ. ಈ ಹಿನ್ನಲೆಯಲ್ಲಿ ಚಿತ್ರಿತವಾಗಿರುವ ಗ್ರಾಮೀಣ ಮತ್ತು ಸ್ಥಳಿಯತೆಯ ಪ್ರತಿನಿಧಿಯಾದ ಸೂರ್ಯ ಅಮೆರಿಕಾಗೆ ಹೋಗುವ ಶಶಾಂಕನನ್ನು ತಡೆಯಲು ಸಾಧ್ಯವಾಗುವುದಿಲ್ಲ. ಶಶಾಂಕ ಅಮೆರಿಕದಲ್ಲಿ ಡಾಲರ್ ರೂಪದ ಹಣ ಗಳಿಕೆ ಹಾಗೂ ಉಪಭೋಗವನ್ನೇ ಬದುಕಿನ ಪರಮ ಗುರಿ ಎಂದು ನಂಬುತ್ತಾನೆ. ಅಮೇರಿಕಾದ ಆಕರ್ಷಣೆಗೆ ಒಳಗಾಗಿ ಹೋದ ಆತನಿಗೆ ತಾನೇನು ಪಡೆದೆ ಮತ್ತು ಏನನ್ನು ಕಳೆದುಕೊಂಡೆ ಎಂದು ಅರಿವಾಗುವಷ್ಟರಲ್ಲಿ ಕಾಲವೇ ಮಿಂಚಿ ಹೋಗಿರುತ್ತದೆ.

ಚೈತನ್ಯದ ಬೀಜವೊಂದನ್ನು ಯಾವ ಮಣ್ಣಿಗೆ ತೆಗೆದುಕೊಂಡು ಹೋಗಿ ನೆಟ್ಟರೂ ಮೊಳಕೆ ಬರುತ್ತದೆ. ಗಿಡ ಆಗುತ್ತದೆ. ಮರ ಆಗುತ್ತದೆ, ಆನಂತರ ನೆರಳು ಕೊಡುತ್ತದೆ. ಈ ಮಾತು ನಾಗತಿಹಳ್ಳಿಯವರಿಗೆ ಚೆನ್ನಾಗಿ ಒಪ್ಪುತ್ತದೆ. ಅವರು ಬರವಣಿಗೆಯಲ್ಲಿ ಮೂಲಕ ಸಾಹಿತ್ಯದಲ್ಲಿ ಗುರುತಿಸಿಕೊಂಡಿದ್ದಾರೆ. ಸಿನಿಮಾ ಅಂಥ ಬಂದಾಗ ಅದರ ಹಲವು ಪ್ರಕಾರಗಳು– ಅಂದರೆ ಸಾಹಿತ್ಯ ಆಗಿರಬಹುದು, ಚಿತ್ರಕಥೆ ಆಗಿರಬಹುದು, ಸಂಭಾಷಣೆ ಆಗಬಹುದು, ಗೀತ ರಚನೆ ಆಗಬಹುದು ಎಲ್ಲದರಲ್ಲು ತೊಡಗಿಕೊಂಡವರು. ಈ ಸಂದರ್ಭದಲ್ಲಿ ಅವರು ಹಲವರಿಗೆ ಬಹುವಿಧವಾಗಿ ಮುಖ್ಯರಾಗುತ್ತಾರೆ. ಯಾಕೆಂದರೆ ವಿಶೇಷವಾಗಿ ಗ್ರಾಮೀಣ ಪ್ರತಿಭೆಗಳಿಗೆ ಸ್ಫೂರ್ತಿಯ ಚಿಲುಮೆ ಆಗಿರುವಂಥ ನಾಗತಿಹಳ್ಳಿ ಅವರದು ದೈತ್ಯ ಪ್ರಖರ ಪ್ರತಿಭೆ. ನಾಗತಿಹಳ್ಳಿ ಚಂದ್ರೇಶಖರ ಅವರ ಪ್ರಥಮ ಸಿನಿಮಾ ಉಂಡುಹೋದ ಕೊಂಡುಹೋದ–ದಿಂದ ಮೊನ್ನೆ ಮೊನ್ನೆ ಬಂದಂತಹ ಇಷ್ಟಕಾಮ್ಯದವರೆಗೂ ಅವರ ಸಿನಿಮಾಗಳಲ್ಲಿ ಸ್ಪಷ್ಟತೆ ಇದೆ. ಸತ್ಯ ಘಟನೆ ಆಧರಿಸಿದ ಉಂಡುಹೋದ ಕೊಂಡು ಹೋದ ಸಿನಿಮಾದಲ್ಲಿ ಎಷ್ಟು ಗಂಭೀರ ಸಮಸ್ಯೆಯನ್ನು ತುಂಬಾ ಸರಳವಾಗಿ ನವಿರಾದ ಹಾಸ್ಯದೊಂದಿಗೆ ನಿರೂಪಿಸಿದ್ದಾರೆ.

ಗ್ರಾಮೀಣ ಪ್ರತಿಭೆಗಳನ್ನ – ಅಂದರೆ ಪಾತ್ರಗಳನ್ನು ಬಳಸಿಕೊಂಡು ಎಲ್ಲಾ ಮನಸ್ಸುಗಳಿಗೆ ಕಟ್ಟ ಕಡೆಯ ಮನುಷ್ಯರವರೆಗೆ ತಲುಪುವಂತೆ ಮಾಡಿದ ದೊಡ್ಡ ಖ್ಯಾತಿ ಅವರದ್ದು. ನಾಗತಿಹಳ್ಳಿಯವರಿಗೆ ಸಾಹಿತ್ಯದಂತೆ ಚಿತ್ರರಂಗದಲ್ಲಿಯೂ ಅತ್ಯಂತ ದೊಡ್ಡ ಸಂಖ್ಯೆಯಲ್ಲಿ ಅಭಿಮಾನಿ ಬಳಗವಿದೆ. ಯಾಕೆಂದರೆ ಆ ತರಹದ ಗಂಭೀರವಾದ ಕತೆಗಳನ್ನು ಭಿನ್ನ ರೀತಿಯಲ್ಲಿ ಪ್ರೇಕ್ಷಕರಿಗೆ ಮುಟ್ಟಿಸಬಹುದು ಎಂಬುದನ್ನು ಸಾಧಿಸಿ ತೋರಿಸಿದ್ದಾರೆ. ಅದರಲ್ಲಿ ಎಲ್ಲವೂ ಇದೆ ನವಿರಾದ ಹಾಸ್ಯವಿತ್ತು. ಒಂದೊಂದು ಪಾತ್ರವನ್ನು ಪ್ರತಿಭಟನೆಯ ಪ್ರತೀಕವಾಗಿ ಕೊಂಡೊಯ್ಯುತ್ತಾರೆ. ಎಷ್ಟೋ ವೇಳೆ ಪಾತ್ರಗಳನ್ನೇ ಅಸ್ತ್ರವನ್ನಾಗಿ ಬಳಸಿದ್ದಾರೆ. ಹಾಗೆ ಬಳಸಿಕೊಳ್ಳುತ್ತಾ ಅದನ್ನೇ ಮನಸ್ಸಿಗೆ ಆಳವಾಗಿ ಇಳಿಸುವ ಗುಣ ಕಂಡುಬರುತ್ತದೆ.ಈ ಮಾದರಿ ನಾಗತಿಹಳ್ಳಿ ಚಂದ್ರಶೇಖರ ಅವರ ಪ್ರತಿಯೊಂದು ಸಿನಿಮಾಗಳಲ್ಲಿ ಕಂಡು ಬರುವ ಸಾಮಾನ್ಯ ಅಂಶವಾಗಿದೆ.

ಉಂಡು ಹೋದ ಕೊಂಡು ಹೋದ ಚಿತ್ರದಿಂದ ಹೂಮಳೆ ಚಿತ್ರದವರೆಗೆ ನಾಗತಿಹಳ್ಳಿ ಚಂದ್ರಶೇಖರ ಅವರನ್ನು ಅಂತರ್ಗತವಾಗಿ ವಿಶ್ಲೇಷಿಸುವುದಾದರೆ ತಮ್ಮ ಬದುಕಿನೊಳಗೆ ಅವರು ರೂಡಿಸಿಕೊಂಡಿದ್ದ ಹೋರಾಟದ ಹಿನ್ನೆಲೆಯನ್ನು ಒಳಗೊಂಡ ಆಶಯಗಳನ್ನು ತಮ್ಮ ನಿರ್ದೇಶನದ ಚಿತ್ರಗಳಲ್ಲಿ ಪ್ರತಿಬಿಂಬಿಸಿರುವುದನ್ನು ಕಾಣಬಹುದು. ಅವರ ಪರಿಸರದ ಹೋರಾಟ ಇರಬಹುದು, ರೈತ ಚಳುವಳಿ ಇರಬಹುದು, ಗೋಕಾಕ್ ಚಳುವಳಿ ಇರಬಹುದು ಎಲ್ಲವನ್ನು ಕೂಡ ಪಾತ್ರಗಳನ್ನಾಗಿಸಿ ತಮ್ಮ ಸಿನಿಮಾದಲ್ಲಿ ದುಡಿಸಿಕೊಂಡಿದ್ದಾರೆ. ನನ್ನ ಪ್ರೀತಿಯ ಹುಡುಗಿಯಿಂದ ಅಮೃತಧಾರೆಯವರೆಗೆ ಎಳೆಯ ಮನಸ್ಸುಗಳನ್ನು, ಅದರ ಸ್ವಭಾವಗಳನ್ನು ಕಥಾಸ್ವರೂಪವಾಗಿ ಬಿಂಬಿಸಿರುವುದು ಸ್ಪಷ್ಟವಾಗುತ್ತದೆ. ಅವರ ಇಷ್ಟಕಾಮ್ಯ ಕೂಡ ಇಂಥದೇ ಒಂದು ದೃಶ್ಯಕಾವ್ಯ. ದೊಡ್ಡೇರಿ ವೆಂಕಟಗಿರಿರಾವ್ ಅವರ ಕಾದಂಬರಿ ಆಧಾರಿತ ಸಿನಿಮಾ ಇದು. ಜೊತೆಗೆ ಬೆಳ್ಳಿತೆರೆಯ ಮೇಲೆ ಬಹಳ ದಿನಗಳ ನಂತರ ಕುವೆಂಪು ಅವರ ಹಾಡನ್ನು ಬಳಸಿಕೊಂಡಿರುವ ಚಿತ್ರ. ಹದಿಹರೆಯದ ಮನಸ್ಸುಗಳ ಹೊಯ್ದಾಟ, ಪ್ರೀತಿ ಪ್ರೇಮದ ತುಡಿತ, ಮದುವೆಯ ನಂತರ ಪ್ರೀತಿಯಲ್ಲಿ ಸಿಗುವ ಡಿಸ್ಕೌಂಟ್ ಕಡಿತ ಇರುವ, ಮನಸ್ಸಿಗೆ ಮುಟ್ಟುವ ಹಾಡುಗಳಿರುವ ಚಿತ್ರ. ನಟರ ಅತಿರೇಕವಿಲ್ಲದ ಅಭಿಯನದ ಚಿತ್ರ, ಭಾವನಾತ್ಮಕ ದೃಶ್ಯಗಳಿರುವ ಚಿತ್ರ, ಮಲೆನಾಡಿನ ಸುಂದರ ಪರಿಸರದ ಮೂಲಕ ಕಣ್ಣಿಗೂ ತಂಪು ನೀಡುತ್ತದೆ. ಇದನ್ನೆಲ್ಲಾ ಸೇರಿಸಿ ಸಿಂಪಲ್ಲಾಗಿ ಒಂದೇ ಸಾಲಿನಲ್ಲಿ ಇದು ನಾಗತಿಹಳ್ಳಿ ಚಂದ್ರಶೇಖರ್ ಅವರ ಚಿತ್ರ ಅಷ್ಟು ಹೇಳಿದರೆ ಸಾಕು ಎನ್ನುವ ಹಾಗೆ ನವಿರು ಭಾವವನ್ನು ತುಂಬಿಕೊಂಡಿದೆ. ನಾಗತಿಹಳ್ಳಿ ಚಂದ್ರಶೇಖರ ಅವರೇ ಸಂದರ್ಶನವೊಂದರಲ್ಲಿ ಹೇಳಿರುವಂತೆ ಕಾಮ್ಯ ಅಂದ್ರೂ ಇಷ್ಟ ಅಂತಲೇ. ತೀವ್ರವಾದ ಇಷ್ಟವನ್ನು ಇಷ್ಟಕಾಮ್ಯ ಅಂತಾರೆ ಒಂದು ವಸ್ತುವನ್ನು, ಮನುಷ್ಯನನ್ನು ಅಥವಾ ಏನನ್ನೇ ಆದರೂ ತೀವ್ರವಾಗಿ ಇಷ್ಟಪಡುವುದು ಇಷ್ಟಕಾಮ್ಯ. ಅಮೃತಧಾರೆ ಆದೂ ಕೂಡು ಕೌಟುಂಬಿಕ ಚಿತ್ರ, ಇದೂ ಕೌಟುಂಬಿಕ ಚಿತ್ರ ಅದು ದಾಂಪತ್ಯದ ಪ್ರೀತಿಯನ್ನು ಹೇಳುತ್ತೆ ಇದು ದಾಂಪತ್ಯದ ವಿಘಟನೆಯನ್ನು ಹೇಳುತ್ತೆ. ಅಮೃತಧಾರೆಯಲ್ಲಿ ದಾಂಪತ್ಯ ಒಂದಾಗುವ ಕಥೆ ಇದೆ. ಇಷ್ಟಕಾಮ್ಯದಲ್ಲಿ ಸಣ್ಣ ಪುಟ್ಟ ಕಾರಣಗಳಿಗೆ ಸಂಬಂಧಗಳು ಹೇಗೆ ಒಡೆದುಹೋಗುತ್ತವೆ ಅದನ್ನು ಸರಿಪಡಿಸುವುದು ಹೇಗೆ ಅನ್ನೋ ಜಿಜ್ಞಾಸೆ ಇದೆ. ಅಮೃತಧಾರೆಯನ್ನು ಇಷ್ಟಪಟ್ಟ ಅದೇ ಕೌಟುಂಬಿಕ ವರ್ಗದ ಮನಸ್ಸುಗಳು ಇದನ್ನೂ ಇಷ್ಟ ಪಡುವ ಹಾಗಿದೆ. ಈ ಚಿತ್ರದಲ್ಲಿ ಎಲ್ಲವೂ ಇದೆ. ಹದಿಹರೆಯದ ಪ್ರೀತಿ, ಒಳ್ಳೆಯ ಹಾಡುಗಳಿವೆ ಕುವೆಂಪು ಅವರ ಹಾಡಿದೆ. ಪ್ರಮುಖವಾಗಿ ದೇಶೀ ನೆಲೆಯ ಮಲೆನಾಡಿನ ಸುಂದರ ಚಿತ್ರಣ ಇದೆ. ಪ್ರೀತಿ ಪ್ರೇಮಗಳ ಆಚೆಗೂ ಕುರಿತು ಈ ಸಿನಿಮಾ ಮಾತನಾಡುತ್ತದೆ. ಮದುವೆ ನಂತರದ ಜೀವನ, ಲಿವಿಂಗ್ ಟುಗೆದರ್ ಶೈಲಿ ಇವೆಲ್ಲದರ ಬಗ್ಗೆನೂ ಮಾತನಾಡುವ ಕ್ರಮ ಈ ಸಂದರ್ಭದ

ನಮ್ಮ ವ್ಯವಸ್ಥೆಯನ್ನು ಕುರಿತು ಚರ್ಚಿಸುವಂತೆ ಮಾಡುತ್ತದೆ. ಅದು ಯಾವತ್ತೂ ಹೊಸ ವಿಷಯಗಳಿಂದಾಗಿ ಮನಸ್ಸಿಗೆ ಮುದ ನೀಡುತ್ತಲೇ ಚಿಂತನಗೆ ಒಡ್ಡುತ್ತದೆ. ವರ್ತಮಾನ ಸಂದರ್ಭದ ತಲ್ಲಣಗಳಿಗೆ ಹೆಚ್ಚು ಗಮನ ನೀಡುವ, ಗಣಿ ಸಮಸ್ಯೆಯನ್ನು ವಸ್ತುವನ್ನಾಗಿಸಿಕೊಂಡ ಸಿನಿಮಾ ಮಾತಾಡ್ ಮಾತಾಡ್ ಮಲ್ಲಿಗೆ. ಗಣಿ ಮಾಫಿಯ ನಮ್ಮ ನಾಡಿನ ರಾಜಕಾರಣವನ್ನು ಆವರಿಸಿ ಆಕ್ರಮಿಸಿಕೊಳ್ಳುತ್ತ, ಮೆರೆಯುತ್ತ, ಗಣಿ ಧಣಿ, ಗಣಿದೊರೆ ಎಂದು ಮಾಧ್ಯಮಗಳಿಂದ ಹಿಗ್ಗಮುಗ್ಗಾ ಹೊಗಳಿಸಿಕೊಳ್ಳುತ್ತಿದ್ದ ಸಾಮಾಜಿಕ ಸಂದರ್ಭವದು. ಗಣಿ ಅಪಾಯಗಳ ಬಗ್ಗೆ ಹೆಚ್ಚಾಗಿ ಯಾರೂ ಬಾಯಿ ಬಿಡದಿದ್ದ ಹೊತ್ತಿನಲ್ಲಿ ಗಣಿಗಾರಿಕೆಯ ಸ್ಥಳೀಯ ಅಪಾಯಗಳಿಂದ ಹಿಡಿದು ಅದರ ಅಂತರರಾಷ್ಟ್ರೀಯ ದ್ರೋಹದವರೆಗು ಮಾಧ್ಯಮದ ಮೂಲಕ ಬೆಳಕು ಚೆಲ್ಲಿ ಜಾಗೃತಿ ಮೂಡಿಸಲು ಪ್ರಯತ್ನಿಸುವ ಆಲೋಚನೆಗಲನ್ನಿಟ್ಟುಕೊಂಡು ನಿರ್ದೇಶಿಸಿದ ಸಿನಿಮಾ ಮಾತಾಡು ಮಾತಾಡು ಮಲ್ಲಿಗೆ. ಮುಖ್ಯವಾಗಿ ವರ್ತಮಾನದ ಸಾಮಾಜಿಕ ತಲ್ಲಣಗಳಿಗೆ ದೃಶ್ಯ ಮತ್ತು ಶ್ರವ್ಯದ ರೂಪಪಡೆದುಕೊಳ್ಳುವುದರ ಜೊತೆಗೆ ನಕ್ಸಲ್ ಚಳವಳಿ ಮತ್ತು ಗಾಂಧೀವಾದವನ್ನು ಮುಖಾಮುಖಿಯಾಗಿಸಿದ ಚಿತ್ರವದು. ವಿದೇಶಿ ಕಂಪನಿ ಹಾಗೂ ಗಣಿ ಮಾಫಿಯಾದ ಅಕ್ರಮಗಳಿಗೆ ನಮ್ಮ ನೆಲ ಜಲ ಸಂಪತ್ತುಗಳನ್ನು ಮಾರಾಟ ಮಾಡುವ ದಲ್ಲಾಳಿಗಳಿಗೆ 'ನೆಲ ಹಿಡುಕರು' ಅಂಥ ಪಟ್ಟಿ ಕಟ್ಟಿದರು.

ನಾಗತಿಹಳ್ಳಿ ಚಂದ್ರಶೇಖರ ಅವರ ಎಲ್ಲಾ ಸಿನಿಮಾಗಳನ್ನ ನೋಡುತ್ತಾ ಹೋದಾಗ ಸಾಮಾನ್ಯವಾಗಿ ನಮ್ಮನ್ನು ಕಾಡುವಂತದ್ದು ಅವರ ತಾಯ್ತನ. ಅದು ಅವರ ಸಿನಿಮಾಗಳಲ್ಲಿ ಎದ್ದು ಕಾಣುತ್ತದೆ. ಕನ್ನಡ ಸಿನಿಮಾ ಸಂದರ್ಭದಲ್ಲಿ ನೋಡುವುದಾದರೆ ಅಲ್ಲಿ ಬರುವಂತಹ ಮಹಿಳಾ ಪಾತ್ರಗಳು ಸಾಮಾನ್ಯವಾಗಿ ಅಬಲೆಯರಾಗಿದ್ದು ಪುರುಷ ಪ್ರಾಬಲ್ಯವೇ ಗೆದ್ದಿರುವಂತಿದೆ. ಒಂದು ರೀತಿಯಲ್ಲಿ ಗಂಡಸಿನ ಹೆಗಲು ಬೇಕು ಅನ್ನುವಂತಹ ಸಂದರ್ಭಗಳಿಂಟು. ಆದರೆ ನಾಗತಿಹಳ್ಳಿ ಸಿನಿಮಾಗಳಲ್ಲಿ ದೈನೇಸಿ ಸ್ಥಿತಿಯಿಂದ ಯಾವ ಸ್ತ್ರೀ ಪಾತ್ರಗಳು ಅಳುವುದಿಲ್ಲ. ಕಾಲಿಗೆ ಬೀಳುವುದಿಲ್ಲ ಅಥವಾ ನಾನು ಅಬಲೆ ಕಾಪಾಡಿ ಅಂಥ ಗೋಳಾಡುವುದಿಲ್ಲ. ಗಟ್ಟಿ ನಿರ್ಧಾರದ ನೆಲೆಯಲ್ಲಿ ಎಲ್ಲಾ ಸ್ತ್ರೀಪಾತ್ರಗಳು ಮಾತಾನಾಡೋದು ಮುಖ್ಯವೆನಿಸುತ್ತದೆ. ಉಂಡುಹೋದ ಕೊಂಡುಹೋದ ಸಿನಿಮಾದಲ್ಲಿ ನಾಯಕಿಯೇ ವರ ಪರೀಕ್ಷೆ ಮಾಡುತ್ತಾಳೆ. ಮದುವೆಯಾಗದೆ ಗೆಳತಿಯಾಗಿ, ಸಹಪಾಠಿಯಾಗಿ, ಗಂಡಿನ ಸರಿಸಮಾನಾಗಿ ಹೆಜ್ಜೆಹಾಕುವ ಆಧುನಿಕ ಮಹಿಳೆಯ ಧ್ವನಿಯನ್ನು ಅಮೇರಿಕಾ ಅಮೇರಿಕಾ ಚಿತ್ರದ ಭೂಮಿಕ ಪಾತ್ರದಲ್ಲಿ ಕಟ್ಟಿಕೊಡುತ್ತಾರೆ. ಗಂಡ ತೀರಿಕೊಂಡ ನಂತರ ಮದುವೆಯ ಮೂಲಕ ತೀರಿಕೊಂಡ ತನ್ನ ಗಂಡನ ಆತ್ಮವನ್ನು ಮುರಿದು, ಮರು ಮದುವೆಯ ಮೂಲಕ ತೀರಿಕೊಂಡ ತನ್ನ ಗಂಡನ ಆತ್ಮವನ್ನು ಸಂತೈಸಬಹುದೆನ್ನುವ ಧ್ವನಿ ಹೂಮಳೆ ಚಿತ್ರದಲ್ಲಿದೆ. ಇನ್ನು ಪ್ರತಿಯೊಬ್ಬ ಸಾಮಾಜಿಕ ಕಾರ್ಯಕರ್ತ ಹೋರಾಟದ ಮೊದಲು ಎದುರಿಸಬೇಕಾಗಿರುವುದು ಆತನ ಕುಟುಂಬವನ್ನೆ. ಮನೆಗೆ ಮಾರಿ ಊರಿಗೆ ಉಪಕಾರಿ ಎಂದು ಕುಟುಂಬದಲ್ಲೇ ಟೀಕೆಗೆ ಒಳಗಾಗುವ ಸಂದರ್ಭದಲ್ಲಿ ಮಾತಾಡ್ ಮಾತಾಡ್ ಮಲ್ಲಿಗೆ ಚಿತ್ರದ ನಾಯಕಿ ಭಿನ್ನವಾಗಿ ಚಿತ್ರಿತಳಾಗಿದ್ದು ಗಂಡನ ಸಮಾಜಮುಖಿ ಹೋರಾಟಕ್ಕೆ ಬೆನ್ನೆಲುಬಾಗಿ ನಿಲ್ಲುವುದು ಉತ್ತಮ ಸಾಮಾಜಿಕ ಕಾಳಜಿಯಾಗಿದೆ. ಎದೆ ಮಟ್ಟಕ್ಕೆ ಬೆಳೆದ ಮಕ್ಕಳು ದ್ರೋಹಮಾಡಬಹುದು. ಆದರೆ ನಾವು ನಂಬಿದ ಭೂಮಿ ನಮಗೆ ಕೈಕೊಡುವುದಿಲ್ಲ ತಾಯಿ ನಮ್ಮನ್ನು ಪೊರೆಯುತ್ತಾಳೆ ಎನ್ನುವ ಭೂಮಿತೂಕದ ವ್ಯಕ್ತಿತ್ವವಾಗಿ ಆ ಪಾತ್ರವನ್ನು ಮೇಲ್ಮಟ್ಟಕ್ಕೆ ತೆಗೆದುಕೊಂಡು ಹೋಗಿದ್ದಾರೆ. ಆ ಮೂಲಕ ಸ್ವದೇಶಿ ತತ್ವದಡಿ ನಮ್ಮ ಸಮುದಾಯದ ಬದುಕನ್ನು ಬಹು ಪ್ರಮುಖವಾಗಿ ಗ್ರಾಮಕೇಂದ್ರಿತ ಚಿಂತನೆಯನ್ನು ಈ ಚಿತ್ರದಲ್ಲಿ ಅಭಿವ್ಯಕ್ತಿಸಿರುವುದು ಈ ಹೊತ್ತಿಗೆ ಬೇಕಾಗಿರುವ ವಿವೇಕ. ಇನ್ನು ನಾಗತಿಹಳ್ಳಿ ಸಿನಿಮಾಲೋಕದಲ್ಲಿ ಅವರು ನಡೆದ ಈ ಹಾದಿ ಹಲವರಿಗೆ ಪಾಠವಾಗಿ ಪರಿಣಮಿಸಿದೆ. ಪ್ರತಿ ಸಿನಿಮಾದಲ್ಲೂ ತಮ್ಮನ್ನು ತಾವು ಶೋಧಿಸಿಕೊಳ್ಳುತ್ತಾ, ದಾಟುತ್ತಾ ಸಿನಿಮಾದಿಂದ ಸಿನಿಮಾಗೆ ಹೊಸ ಹೊಸ ಕಥಾವಸ್ತುಗಳನ್ನು ಶೋಧಿಸಿದ್ದು ಮತ್ತು ಚಿತ್ರಿಸಿದ್ದು ನಾಗತಿಹಳ್ಳಿಯವರ ವಿಶೇಷ ಎನ್ನಬಹುದು. ದೃಶ್ಯ ಮಾಧ್ಯಮದಲ್ಲಿ ಜಾತಿ ಸಮಸ್ಯೆಯ ಕೂಗು ಮಾಯವಾಗಿದ್ದಲ್ಲಿ ಅಸ್ಪೃಶ್ಯತೆ ಸಮಸ್ಯೆ ಇಟ್ಟುಕೊಂಡು ಕುಂವೀ ಅವರ ಕಥೆ ಆಧರಿಸಿ ಕೊಟ್ರೇಶಿ ಕನಸು ಸಿನಿಮಾವನ್ನು ನಮಗೆ ಕಟ್ಟಿಕೊಟ್ಟರು. ಆ ಮುಖಾಂತರ ಮತ್ತೆ ಬೇರೆ ಬೇರೆ ವಿಚಾರಗಳಿಗೆ ಚಿತ್ರರಂಗದಲ್ಲಿ ದನಿಯಾದರು. ಅಧಿಕಾರಶಾಹಿ, ಬಂಡವಾಳಶಾಹಿ ಮೌಲ್ಯಗಳು ಮನುಷ್ಯ ಸಂಬಂಧಗಳನ್ನು ನಿಯಂತ್ರಿಸುತ್ತ ಹೊರಟ ಸಂದರ್ಭಗಳನ್ನು ತಮ್ಮ ಚಿತ್ರಗಳ ಪಾತ್ರಗಳ ಮೂಲಕ ಹೇಳಲು ಮಾಡಿರುವ ಪ್ರಯತ್ನ ಶ್ಲಾಘನೀಯವಾದುದು. ಗಂಡಿನ ನೆರಳನ್ನೆ ಆಶ್ರಯಿಸುತ್ತ ಗಂಡಿನ ಮುಲಾಜಿನಲ್ಲೆ ಬದುಕಬೇಕೆನ್ನುವ ಹಂಗಿಗೆ ಪ್ರತಿಭಟನೆಯಾಗಿ ಖಚಿತ ನಿಲುವುಗಳನ್ನಿಟ್ಟುಕೊಂಡು ಮಾತನಾಡುವ ಮಹಿಳಾ ಪಾತ್ರಗಳಿಗೆ ಜೀವತುಂಬಿರುವಲ್ಲಿ ಇವರ ಸ್ತ್ರಿ–ಪರ ಕಾಳಜಿಗಳು ಅಭಿವ್ಯಕ್ತಗೊಂಡಿವೆ. ನಾಗತಿಹಳ್ಳಿಯವರು ತಮ್ಮ ಸಿನಿಮಾಗಳಲ್ಲಿ ಪಾತ್ರ ಮತ್ತು ಸಂಬಂಧಗಳಲ್ಲಿ ಸಭ್ಯತೆ ಮತ್ತು ಘನತೆ ತುಂಬಿ ತುಳುಕುವಷ್ಟು ತಂದಿರಿಸಿದ್ದಾರೆ. ಜಗತ್ತಿನ ಸಮೃದ್ಧ ಭಾಷೆ ಮೌನವೆನ್ನುವ ನಾಗತಿಹಳ್ಳಿ ಅವರು,ಅವರ ನಿರ್ದೇಶನದ ಸಿನಿಮಾಗಳು ಕೂಡ ಮುಗಿಯದ ಮೌನ.

**ನಾಗತಿಹಳ್ಳಿ ಚಂದ್ರಶೇಖರ ಅವರ ಸನಿಮಾಯಾನದ ಸಂಕ್ಷಿಪ್ತ ನೋಟ**

ಕಾಡಿನ ಬೆಂಕಿ – (1986) ಚಿತ್ರಕಥೆ, ಸಂಭಾಷಣೆ, ಗೀತಸಾಹಿತ್ಯ ರಾಷ್ಟ್ರಪ್ರಶಸ್ತಿ ಮತ್ತು ರಾಜ್ಯಪ್ರಶಸ್ತಿ.

ಸಂಕ್ರಾಂತಿ(1988) – ಕಥೆ, ಗೀತಸಾಹಿತ್ಯ, ಕಥೆಗೆ ರಾಜ್ಯಪ್ರಶಸ್ತಿ ಮತ್ತು ಬರ್ಕಲಿ ತರಂಗಿಣಿ ಪ್ರಶಸ್ತಿ ಪ್ರಥಮ ಉಷಾ ಕಿರಣ (1989)ಚಿತ್ರಕಥೆ, ಸಂಭಾಷಣೆ, ಗೀತಸಾಹಿತ್ಯರಾಜ್ಯಪ್ರಶಸ್ತಿ ಮತ್ತು ಫಿಲಂಫೇರ್ ಪ್ರಶಸ್ತಿ

ಉದ್ಭವ – ಚಿತ್ರಕಥೆ,ಸಂಭಾಷಣೆ,ಸಂಭಾಷಣೆಗೆರಾಜ್ಯ ಪ್ರಶಸ್ತಿ ಮತ್ತು (1990)ಸಾಹಿತ್ಯಬರ್ಕಲಿ ತರಂಗಿಣಿ ಪ್ರಶಸ್ತಿ

ಉಂಡು ಹೋದ ಕೊಂಡು ಹೋದ – ನಿರ್ದೇಶನ,ಚಿತ್ರಕಥೆ'ಅತ್ಯುತ್ತಮ ಕತೆಗಾರ' ರಾಜ್ಯಪ್ರಶಸ್ತಿ ಕಥೆ, ಗೀತಸಾಹಿತ್ಯ ತಾರಾ ಪೂರ್ಣ ಪ್ರಮಾಣದ ನಾಯಕಿ. ಹೊಸ ಕಲಾವಿದರಾಗಿ ಕರಿಬಸವಯ್ಯ ಈ ಚಿತ್ರದಿಂದ ಬೆಳ್ಳಿತೆರೆಗೆ ಪರಿಚಿಯ

ಬಾ ನಲ್ಲೆ ಮಧು ಚಂದ್ರಕೆ, ಕಥೆ, ಚಿತ್ರಕಥೆ. ಸಂಭಾಷಣೆ ನಿರ್ದೇಶನ, ಗೀತಸಾಹಿತ್ಯ, ಯಶಸ್ವಿ ಚಿತ್ರ ಹೊಸ ಕಲಾವಿದರಾದ ಶಿವರಾಂ ಈ ಚಿತ್ರದಿಂದ ಬೆಳ್ಳಿತೆರೆಗೆ ಪರಿಚಯ

ಕೊಟ್ರೇಶಿ ಕನಸು (1994) – ನಿರ್ದೇಶನ, ಗೀತಸಾಹಿತ್ಯ, ಚಿತ್ರಕಥೆ, ಸಂಭಾಷಣೆ ರಾಷ್ಟ್ರಪ್ರಶಸ್ತಿ ಮತ್ತು ರಾಜ್ಯಪ್ರಶಸ್ತಿ. ಮದ್ರಾಸ್ ಫಿಲಂ ಫ್ಯಾನ್ಸ್ ಅಸೋಸಿಯೆಷನ್ ಪ್ರಶಸ್ತಿ, ನಿರ್ದೇಶಕರ ಸಂಘದ ಪ್ರಶಸ್ತಿ, ಏಷ್ಯನ್ ಫಿಲಂ ಫೆಸ್ಟಿವಲ್ ಮತ್ತು ಅಮೇರಿಕಾದ ಹಲವಾರು ವಿಶ್ವವಿದ್ಯಾಲಯಗಳಲ್ಲಿ ಪ್ರದರ್ಶನ.ಮಾ.ವಿಜಯ ರಾಘವೇಂದ್ರ ಅವರಿಗೆ 'ಅತ್ಯುತ್ತಮ ಬಾಲನಟ' ರಾಷ್ಟ್ರೀಯ ಪ್ರಶಸ್ತಿ.

ಊರ್ವಶಿ (1995) – ಗೀತಸಾಹಿತ್ಯ ಚಿತ್ರಕಥ.1995 ರಲ್ಲಿ ರಾಜ್ಯಪ್ರಶಸ್ತಿ

ಅಮೇರಿಕಾ! ಅಮೇರಿಕಾ! – ನಿರ್ದೇಶನ, ಚಿತ್ರಕಥೆ, ಸಂಭಾಷಣೆ ಗೀತಸಾಹಿತ್ಯ, ಕಥೆ ಶೇ. 75 ಭಾಗ ಅಮೇರಿಕಾದಲ್ಲಿ ಚಿತ್ರಣಗೊಂಡ ಪ್ರಥಮ (1996) ಭಾರತೀಯ ಚಿತ್ರ, ಸಂಗೀತ ನಿರ್ದೇಶಕ ಮನೋಮೂರ್ತಿ ಬೆಳ್ಳಿತೆರೆಗೆ ಪರಿಚಯ. ರಾಷ್ಟ್ರಪ್ರಶಸ್ತಿ. ಸಂದೇಶ ಪ್ರಶಸ್ತಿ ಚಿತ್ರ ಪ್ರೇಮಿಗಳ ಸಂಘ, ಮದ್ರಾಸ್ ಫಿಲಂ ಫ್ಯಾನ್ಸ್ ಅಸೋಸಿಯೆಷನ್ ಪ್ರಶಸ್ತಿ. ಆರ್ಯಭಟ ಪ್ರಶಸ್ತಿಗಳ ಜೊತೆಗೆ 28 ವಿವಿಧ ಪ್ರಶಸ್ತಿ. ಕರ್ನಾಟಕದ ಹಲವಾರು ಚಿತ್ರಮಂದಿರಗಳಲ್ಲಿ 365 ದಿನ ಪ್ರದರ್ಶನ. ತೆಲುಗು ಮತ್ತು ತಮಿಳು ಭಾಷೆಗಳಲ್ಲಿ ನಿರ್ಮಾಣ.

ಹೂಮಳೆ (1998) – ನಿರ್ದೇಶನ, ಗೀತಸಾಹಿತ್ಯ, ಸಂಭಾಷಣೆ ಚಿತ್ರಕಥೆ ರಾಷ್ಟ್ರಪ್ರಶಸ್ತಿ ಮತ್ತು ರಾಜ್ಯಪ್ರಶಸ್ತಿ ಉದಯ ಟಿ.ವಿ. ಪ್ರಶಸ್ತಿ,ಸುಮನ್ ನಗರ್‌ಕರ್ ಪೂರ್ಣ ಪ್ರಮಾಣದ ನಾಯಕಿ.

ನನ್ನ ಪ್ರೀತಿಯ ಹುಡುಗಿ – ಚಿತ್ರಕಥೆ, ಸಂಭಾಷಣೆ ನಿರ್ದೇಶನ, ಗೀತಸಾಹಿತ್ಯ, ಹೊಸ ಕಲಾವಿದರಾದ ಧ್ಯಾನ್ ಮತ್ತು ದೀಪಾಲಿ ಈ ಚಿತ್ರದಿಂದ ಬೆಳ್ಳಿತೆರೆಗೆ ಪರಿಚಯ, 25 ವಾರಗಳ ಪ್ರದರ್ಶನ. 2002 ರಲ್ಲಿ ಉತ್ತಮ ನಿರ್ದೇಶನಕ್ಕಾಗಿ ಫಿಲಂಫೇರ್ ಪ್ರಶಸ್ತಿ.

ಸೂಪರ್ ಸ್ಟಾರ್ (2001) – ನಿರ್ದೇಶನ, ನೇಪಾಳಿ ರಾಜಕುಮಾರ ದೀಪೇಂದ್ರನ ದುರಂತ ಪ್ರೇಮ ಕಥೆಯ ಸ್ಫೂರ್ತಿಯಿಂದ ತಯಾರಾದ ಚಿತ್ರ.

ಪ್ಯಾರೀಸ್ ಪ್ರಣಯ – ನಿರ್ದೇಶನ, ಸಾಹಿತ್ಯ ಕಥೆ, ಚಿತ್ರಕಥೆ ಸಂಭಾಷಣೆ2004 ರಲ್ಲಿ 3 ರಾಜ್ಯಪ್ರಶಸ್ತಿ (ಉತ್ತಮ ಸಾಹಿತ್ಯ ಉತ್ತಮ ಸಂಗೀತ, ಉತ್ತಮ ಗಾಯಕಿ) 2004 ರಲ್ಲಿ ಉತ್ತಮ ಚಿತ್ರಕ್ಕಾಗಿ ಫಿಲಂಫೇರ್ ಪ್ರಶಸ್ತಿ ಸಂಗೀತ ನಿರ್ದೇಶಕ ಪ್ರಯೋಗ್ ಬೆಳ್ಳಿತೆರೆಗೆ ಪರಿಚಯ.

ಅಮೃತಧಾರೆ (2005) – ನಿರ್ಮಾಣ, ನಿರ್ದೇಶನ, ಸಾಹಿತ್ಯ, ಚಿತ್ರಕಥೆ, 2006 ರಲ್ಲಿ 3 ರಾಜ್ಯಪ್ರಶಸ್ತಿ (3ನೇ ಅತ್ಯುತ್ತಮ ಚಿತ್ರ, ಉತ್ತಮ ಗಾಯಕಿ, ಉತ್ತಮ ಧ್ವನಿಗ್ರಾಹಕ) 30 ವಾರಗಳ ಯಶಸ್ವಿ ಪ್ರದರ್ಶನ. ಅಮಿತಾಬ್ ಬಚ್ಚನ್ ವಿಶೇಷ ಪಾತ್ರದಲ್ಲಿ ಅಭಿನಯ. ತೆಲುಗು ಭಾಷೆಯಲ್ಲಿ ನಿರ್ಮಾಣ.

ಮಾತಾಡ್ ಮಾತಾಡು ಮಲ್ಲಿಗೆ – ನಿರ್ದೇಶನ, ಸಾಹಿತ್ಯ, ಕಥೆ, ಚಿತ್ರಕಥೆ & ಸಂಭಾಷಣೆ 2007 ರ ಮದರಾಸಿನ ಪ್ರತಿಷ್ಠಿತ 'ಸಿಕಾ' ಅವಾರ್ಡ್ ಉತ್ತಮ ನಿರ್ದೇಶನಕ್ಕಾಗಿ ಪ್ರತಿಷ್ಠಿತ ಕಾನ್ ಚಿತ್ರೋತ್ಸವದಲ್ಲಿ ಪ್ರದರ್ಶನವಾದ ಮೊದಲ ಕನ್ನಡ ಚಿತ್ರ, ಹಲವಾರು ಅಂತರಾಷ್ಟ್ರೀಯ ಚಿತ್ರೋತ್ಸವಗಳಲ್ಲಿ ಪ್ರದರ್ಶನ. 2007 ರ 3ನೇ ಅತ್ಯುತ್ತಮ ಚಿತ್ರ ರಾಜ್ಯಪ್ರಶಸ್ತಿ.

ಒಲವೇ ಜೀವನ ಲೆಕ್ಕಾಚಾರ – ನಿರ್ದೇಶನ, ಸಾಹಿತ್ಯ, ಕಥೆ, ಚಿತ್ರಕಥೆ & ಸಂಭಾಷಣೆಭೂಮಿ ದುಂಡಗಿದೆ ಕಥೆ ಆಧರಿಸಿದ ಚಿತ್ರ. ಯುವಜನರನ್ನು ದಾರಿತಪ್ಪಿಸುವ ಹುಸಿ ಕ್ರಾಂತಿಕಾರಿಗಳ ಮುಖವಾಡವನ್ನು ಕಳಚುವ ಕಥಾವಸ್ತುವುಳ್ಳ ಚಿತ್ರ.

ನೂರು ಜನ್ಮಕೂ (2010) – ನಿರ್ದೇಶನ, ಸಾಹಿತ್ಯ, ಕಥೆ, ಚಿತ್ರಕಥೆ &

ಸಂಭಾಷಣೆ ಮಹತ್ವಾಕಾಂಕ್ಷಿ ಯುವಜನರ ಉದ್ಯಮಶೀಲತೆ, ಪ್ರೇಮ, ಜಾಗತೀಕರಣ, ಆರ್ಥಿಕಹಿಂಜರಿತ ಮುಂತಾದ ವಸ್ತುಗಳನ್ನು ಒಳಗೊಂಡ ಚಿತ್ರ.
ಬ್ರೇಕಿಂಗ್ ನ್ಯೂಸ್ (2012) – ನಿರ್ದೇಶನ, ಸಾಹಿತ್ಯ, ಕಥೆ, ಚಿತ್ರಕಥೆ ಮತ್ತು ಸಮಾಜದ ಮೇಲೆ ದೃಶ್ಯ ಮಾಧ್ಯಮ, ವಿಶೇಷವಾಗಿ ಕಿರುತೆರೆಯ ಗೀತೆಗಳು ಪ್ರಭಾವದ ಹಿನ್ನೆಲೆಯಲ್ಲಿ ರೂಪು ತಳೆದ ಹಾಸ್ಯಮಯ ಚಿತ್ರ.
ಇಷ್ಟಕಾಮ್ಯ (2016) – ನಿರ್ದೇಶನ, ಸಾಹಿತ್ಯ, ದೊಡ್ಡೇರಿ ವೆಂಕಟಗಿರಿರಾವ್ ಅವರ ಕಾದಂಬರಿ ಆಧಾರಿತ ಸಿನಿಮಾ ಇದು. ಜೊತೆಗೆ ಬೆಳ್ಳಿತೆರೆಯ ಮೇಲೆ ಬಹಳ ದಿನಗಳ ನಂತರ ಕುವೆಂಪು ಅವರ ಹಾಡನ್ನು ಬಳಸಿಕೊಂಡಿರುವ ಚಿತ್ರ. ಹದಿಹರೆಯದ ಮನಸ್ಸುಗಳ ಹೊಯ್ದಾಟ, ಪ್ರೀತಿ ಪ್ರೇಮದ ತುಡಿತ, ಮದುವೆಯ ನಂತರ ಪ್ರೀತಿಯಲ್ಲಿ ಸಿಗುವ ಡಿಸ್ಕೌಂಟ್ ಕಡಿತ ಇರುವ, ಮನಸ್ಸಿಗೆ ಮುಟ್ಟುವ ಹಾಡುಗಳಿರುವ ಚಿತ್ರ. ನಟರ ಅತಿರೇಕವಿಲ್ಲದ ಅಭಿಯನದ ಚಿತ್ರ, ಭಾವನಾತ್ಮಕ ದೃಶ್ಯಗಳಿರುವ ಚಿತ್ರ, ಮಲೆನಾಡಿನ ಸುಂದರ ಪರಿಸರದ ಮೂಲಕ ಕಣ್ಣಿಗೂ ತಂಪು ನೀಡುತ್ತದೆ. ಕನ್ನಡ ಮಣ್ಣಿನ ರಮ್ಯ ಪ್ರೇಮಕಾವ್ಯವಾಗಿ ಇಷ್ಟಕಾಮ್ಯ ರೂಪಿತವಾಗಿದೆ.

**ಪರಾಮರ್ಶನ**


1. ಬರಗೂರು ರಾಮಚಂದ್ರಪ್ಪ ಃ ಕನ್ನಡ ಸಾಹಿತ್ಯದಲ್ಲಿ ನೋವಿನ ನೆಲೆಗಳು ಃ ಕ. ಸಾ.ಅ.ಬೆಂ –1993
2. ಬರಗೂರು ರಾಮಚಂದ್ರಪ್ಪ ಃ ಕನ್ನಡ ಸಾಹಿತ್ಯದಲ್ಲಿ ಅಸ್ಪೃಶ್ಯತೆಯ ಪರಿಕಲ್ಪನೆ ಃ ಕ.ಸಾ.ಅ. ಬೆಂ –1993
3. ರಹಮತ್ ತರೀಕೆರೆ ಸಂಸ್ಕೃತಿ ಅಧ್ಯಯನ, ಕರ್ನಾಟಕಸಾಹಿತ್ಯಅಕಾಡಮಿ, ಬೆಂಗಳೂರು, 2008
4. ರಹಮತ್ ತರಿಕೆರೆ,, ಪ್ರತಿಸಂಸ್ಕೃತಿ, ಅಭಿನವ ಪ್ರಕಾಶನ, ಬೆಂಗಳೂರು–2003
5. ಹಾಲತಿ ಸೋಮಶೇಖರ್.(ಡಾ) –ಮಹಿಳಾ ಚಳುವಳಿ ಸಾಮಾಜಿಕ ಮತ್ತು ಸಾಂಸ್ಕೃತಿಕ ಹಿನ್ನಲೆ– ವಿಸ್ಮಯ ಪ್ರಕಾಶನ ಮೈಸೂರು–2003